ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: 6 ಮುಖ್ಯಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ

ದಿನಾಂಕ : DATE : 7/1/21

# ಶೇ 100 ಆಸನ ಭರ್ತಿ: ಸಿ.ಎಂಗೆ ಚಿತ್ರೋದ್ಯಮದ ಮನವಿ

ಪ್ರಜಾವಾಣಿ ವಾರ್ತೆ 7-1-2021

ಬೆಂಗಳೂರು: ರಾಜ್ಯದ ಚಿತ್ರಮಂದಿರಗಳಲ್ಲಿ ಶೇ 100ರಷ್ಟು ಆಸನ ಭರ್ತಿಗೆ ಅವಕಾಶ ಕೊಡಬೇಕು ಎಂದು ಕೋರಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಡಿ.ಆರ್. ಜೈರಾಜ್ ನೇತೃತ್ವದ ನಿಯೋಗ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿದೆ.

ಮನವಿಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ಪೂರ್ಣ ಪ್ರಮಾಣದ ಆಸನ ಭರ್ತಿ ಸಾಧ್ಯತೆ ಬಗ್ಗೆ ಪರಿಶೀಲಿಸುವಂತೆ ಅವರು ಅಧಿಕಾರಿಗಳಿಗೆ ಮೌಖಿಕ ಸೂಚನೆ ನೀಡಿದರು ಎಂದು ಜೈರಾಜ್ ಹೇಳಿದರು.

ಜೈರಾಜ್ ಮಾತನಾಡಿ, 'ಶೇ 50ರ ಆಸನ ಭರ್ತಿಯ ಕಾರಣದಿಂದಾಗಿ ಹೊಸ ಸಿನಿಮಾಗಳು ಬಿಡುಗಡೆ ಆಗುತ್ತಿಲ್ಲ. ಶೇ 50ರಷ್ಟು ಆಸನ ಭರ್ತಿ ಮಾಡಿ ಪ್ರದರ್ಶನ ಮಾಡಿದರೆ ನಮ್ಮ ವೆಚ್ಚವೇನೂ ಕಡಿಮೆ ಆಗುವುದಿಲ್ಲ. ಅದು ಶೇ 100ರ ಪ್ರದರ್ಶನದಷ್ಟೇ ಇರುತ್ತದೆ. ನಿರ್ಮಾಪಕರೂ ಚಿತ್ರಗಳನ್ನು ಬಿಡುಗಡೆ ಮಾಡದೇ ಹೋದರೆ ಪ್ರದರ್ಶನದಲ್ಲಿ ನಿರಂತರತೆ (ಒಂದು ಚಿತ್ರದ ಪ್ರದರ್ಶನ ಅವಧಿ ಮುಗಿದ ಬಳಿಕ ಇನ್ನೊಂದು ಚಿತ್ರ) ಕಾಯ್ದುಕೊಳ್ಳಲು ಅಸಾಧ್ಯ. ಒಟ್ಟಿನಲ್ಲಿ ಪರಿಸ್ಥಿತಿ ಹೀಗೇ ಮುಂದುವರಿದರೆ ಚಿತ್ರೋದ್ಯಮದ ಚೇತರಿಕೆ ಅಸಾಧ್ಯ' ಎಂದು ಅವರು ಹೇಳಿದರು.

ಮಕರ ಸಂಕ್ರಾಂತಿ ಬಳಿಕ ಚಿತ್ರಮಂದಿರಗಳಲ್ಲಿ ಪೂರ್ಣ ಪ್ರಮಾಣದ ಆಸನ ಭರ್ತಿಗೆ ಸರ್ಕಾರ ಅವಕಾಶ ಕೊಡಬಹುದು ಎಂಬ ನಿರೀಕ್ಷೆಯನ್ನು ಚಿತ್ರೋದ್ಯಮದ ಮೂಲಗಳು ವ್ಯಕ್ತಪಡಿಸಿವೆ. ಕೆಜಿಎಫ್ ಚಾಪ್ಟರ್-2 ಸಹಿತ ದೊಡ್ಡ ಬಜೆಟ್, ನಟರನ್ನೊಳಗೊಂಡ ಹಲವಾರು ಚಿತ್ರಗಳು ಬಿಡುಗಡೆಗೆ ಕಾದು ನಿಂತಿವೆ. ಮಾರುಕಟ್ಟೆ (ಪೂರ್ಣ ಪ್ರಮಾಣದ ಪ್ರೇಕ್ಷಕರು) ಬೆಳವಣಿಗೆ ನೋಡಿಕೊಂಡೇ ಮುಂದಿನ ಹೆಜ್ಜೆ ಇಡಲು ನಿರ್ಮಾಪಕರು ಆಲೋಚಿಸಿದ್ದಾರೆ. ಅನ್‌ಲಾಕ್ 5.0 ಬಳಿಕ ಕನ್ನಡದಲ್ಲಿ ಆ್ಯಕ್ಟ್-1978, ಕಿಲಾಡಿಗಳು ಚಿತ್ರಗಳು ಬಿಡುಗಡೆಯಾಗಿವೆ.

### ಮುಖ್ಯಾಂಶಗಳು

- ಪರಿಸ್ಥಿತಿ ಹೀಗೇ ಮುಂದುವರಿದರೆ ಚೇತರಿಕೆ ಅಸಾಧ್ಯ
- ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ನೇತೃತ್ವದ ನಿಯೋಗದಿಂದ ಮನವಿ
- ಅಧಿಕಾರಿಗಳಿಗೆ ಮುಖ್ಯಮಂತ್ರಿ ಮೌಖಿಕ ಸೂಚನೆ

## ರಾಜ್ಯಕ್ಕೆ 'ಸುಪ್ರೀಂ' ನೋಟಿಸ್

ನವದೆಹಲಿ: ರಾಜ್ಯದ ಬಳ್ಳಾರಿ, ತುಮಕೂರು ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಅಗೆದು ಹೊರತೆಗೆಯಲಾದ ಕಬ್ಬಿಣ ಅದಿರನ್ನು ಸಾಗಿಸಲು ಅನುಮತಿ ನೀಡುವಂತೆ ಕೋರಿ ಫೆಡರೇಷನ್ ಆಫ್ ಇಂಡಿಯನ್ ಮಿನರಲ್ ಇಂಡಸ್ಟ್ರೀಜ್ (ಎಫ್‌ಐಎಂಐ)ನ ದಕ್ಷಿಣ ಭಾರತ ಶಾಖೆ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಈ ಹಿನ್ನೆಲೆಯಲ್ಲಿ, ಮುಖ್ಯನ್ಯಾಯಮೂರ್ತಿ ಎಸ್.ಎ.ಬೊಬಡೆ, ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ, ವಿ.ರಾಮಸುಬ್ರಮಣಿಯನ್ ಅವರಿರುವ ನ್ಯಾಯಪೀಠ ಕರ್ನಾಟಕ ಸರ್ಕಾರಕ್ಕೆ ಬುಧವಾರ ನೋಟಿಸ್ ಜಾರಿ ಮಾಡಿ, ವಿಚಾರಣೆಯನ್ನು ಜ. 29ಕ್ಕೆ ಮುಂದೂಡಿದೆ.

'ಗಣಿಗಾರಿಕೆ ನಡೆಸಲು ಲೀಸ್ ಪಡೆದಿದ್ದ 39 ಕಂಪನಿಗಳ ಪರವಾನಗಿ ಅವಧಿ ಕಳೆದ ವರ್ಷ ಮಾರ್ಚ್ 20ಕ್ಕೆ ಮುಗಿದಿದೆ. ಪರವಾನಗಿ ಅವಧಿ ಮುಗಿವ ಮುನ್ನವೇ ಅಂದಾಜು 23.72 ಲಕ್ಷ ಮೆಟ್ರಿಕ್ ಟನ್‌ನಷ್ಟು ಕಬ್ಬಿಣದ ಅದಿರನ್ನು ಅಗೆದು ಹೊರತೆಗೆಯಲಾಗಿದೆ' ಎಂದು ಎಫ್‌ಐಎಂಐ ತಿಳಿಸಿದೆ.

Bengaluru